ಹೊತ್ತಿಕೊಂಡಿತು. ೧೯೦೬ರಲ್ಲಿ ದಾವಣಗೇರಿಯಿಂದ "ಧನುರ್ದಾರಿ" ಎಂಬ ಪತ್ರಿಕೆಯನ್ನು ಹರ್ಡೇಕರ ಮಂಜಪ್ಪನವರು ಆರಂಭಿಸಿದರು. ಜೊತೆಗೆ ೧೯೩೧ರಲ್ಲಿ "ಶರಣ ಸಂದೇಶ" ಎನ್ನುವ ಮತ್ತೊಂದು ಪತ್ರಿಕೆಯನ್ನು ಹುಟ್ಟು ಹಾಕಿದರು. ರಾಜಕೀಯ, ಆರ್ಥಿಕ ವಿಷಯಗಳ ಜೊತೆಗೆ ಸಾಮಾಜಿಕ ವಿಷಯಗಳಿಗೂ ಪ್ರಾಮುಖ್ಯತೆ ಕೊಟ್ಟು ಪತ್ರಿಕೆ ಸರಿಯಾದ ಮಾರ್ಗದಲ್ಲಿ ಕ್ರಮಿಸುವಂತೆ ಕ್ರಿಯಾಶೀಲರಾದರು. ೧೯೫೧-೧೯೫೨ರಲ್ಲಿ ದೇಶದಲ್ಲಿ ಸ್ವಾತಂತ್ರ್ಯ ನಂತರ ಮೊಟ್ಟ ಮೊದಲ ರಾಷ್ಟ್ರೀಯ ಚುನಾವಣೆ ನಡೆಯಿತು. ಭಾರತದ ಪತ್ರಿಕೆಗಳು ತುಂಬ ವೃತ್ತಿಪರತೆಯಿಂದ ಚುನಾವಣೆಯನ್ನು ವರದಿ ಮಾಡಿ ಪ್ರಶಂಸೆಗೆ ಪಾತ್ರವಾದವು. ಸ್ವಾತಂತ್ರ್ಯೋತ್ತರ ಭಾರತೀಯ ಪತ್ರಕೋಧ್ಯಮ ಪ್ರಗತಿಶಿಲಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದವು. ಭಾಷಾವಾರು ರಾಜ್ಯಗಳ ರಚನೆ, ಚೀನಿ ಆಕ್ರಮಣ, ಗೋವಾ ವಿಮೋಚನೆ ಮೊದಲಾದ ಸಂದರ್ಭಗಳಲ್ಲಿ ಪತ್ರಿಕೆಗಳು ರಚನಾತ್ಮಕ ಪಾತ್ರವಹಿಸಿದ್ದವು. ೧೯೭೫ರಲ್ಲಿ ಭಾರತದ ಪತ್ರಿಕೆಗಳಿಗೆ ಪರ್ವಕಾಲ ಇಂದಿರಾಗಾಂಧಿಯವರು ದೇಶದಲ್ಲಿ ಆಂತರಿಕ ತುರ್ತುಪರಿಸ್ಥಿತಿಯನ್ನು ಘೋಷಿಸಿದರು. ತುರ್ತುಪರಿಸ್ಥಿತಿ ಆಜ್ಞೆಯನ್ವಯ ಪತ್ರಿಕೆಗಳ ಮೇಲೆ ಸೆನ್ಸಾರ ವಿಧಿಸಲಾಯಿತು. ರಾಷ್ಟ್ರೀಯ ಮತ್ತು ಪ್ರಾದೇಶಿಕ ಪತ್ರಿಕೆಗಳು ತುರ್ತುಪರಿಸ್ಥಿತಿಯನ್ನು, ಸೆನ್ಸಾರ್ ಜಾರಿಯನ್ನು ಉಗ್ರವಾಗಿ ವಿರೋಧಿಸಿದವು ಇಂಡಿಯನ್ ಎಕ್ಸ್‌ಪ್ರೆಸ್, ಪ್ರಜಾವಾಣಿ ಪತ್ರಿಕೆಗಳು ತುರ್ತುಪರಿಸ್ಥಿತಿ ಮರುದಿನ ಸಂಪಾದಕೀಯ ಅಂಕಣವನ್ನು ಖಾಲಿಬಿಟ್ಟು ನವೀನ ರೀತಿಯಲ್ಲಿ ಪ್ರತಿಭಟಿಸಿದವು. ಇನ್ನೂರು ವರ್ಷಗಳಿಗೂ ಮಿಕ್ಕ ಇತಿಹಾಸ ಹೊಂದಿರುವ ಭಾರತೀಯ ಪತ್ರಿಕೋದ್ಯಮ ಭವ್ಯ ಪರಂಪರೆಯನ್ನು ಹೊಂದಿದೆ. ಈ ಇನ್ನೂರು ವರ್ಷಗಳಲ್ಲೂ ಭಾರತದ ಪತ್ರಿಕೆಗಳು ಸಮರ್ಪಿತ ಮನೋಭಾವದಿಂದ ಹಾಗೂ ನಿರ್ಭೀತ ಹೋರಾಟದಿಂದ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ದುಡಿದಿವೆ. ರಾಷ್ಟ್ರಹಿತ, ಸಮಾಜಹಿತವನ್ನು ಪರಮೋಚ್ಚವೆಂದು ಭಾವಿಸಿ ಕಾರ್ಯನಿರ್ವಹಿಸಿವೆ. ಸ್ವಾತಂತ್ರ್ಯ ನಂತರ ಭಾರತೀಯ ಪತ್ರಿಕೋದ್ಯಮ, ಚಲನಚಿತ್ರ, ವಾಣಿಜ್ಯ, ಕ್ರೀಡಾಪತ್ರಿಕೆಗಳು, ವಿಜ್ಞಾನ ಪತ್ರಿಕೆಗಳು ಮೊದಲಾದ ಹೊಸ ಆಯಾಮಗಳನ್ನು ಪಡೆದುಕೊಂಡಿವೆ. ಇಂಗ್ಲೀಷ ಹಾಗೂ ಪ್ರಾದೇಶಿಕ ಭಾಷೆಗಳಲ್ಲಿ ನೂರಾರು ನಿಯತಕಾಲಿಕೆಗಳು, ಪುರವಣಿಗಳು ಪ್ರಕಟವಾಗುತ್ತಿವೆ.

■■

ಮುಖ್ಯಸ್ಥರು ಕನ್ನಡ ವಿಭಾಗ, ಬಸವೇಶ್ವರ ಕಲಾ ಮತ್ತು ವಾಣಿಜ್ಯ, ವಾಣಿಜ್ಯ ಮಹಾವಿದ್ಯಾಲಯ, ಬಸವನ ಬಾಗೇವಾಡಿ. ಜಿಲ್ಲೆ – ವಿಜಯಪುರ-ಕರ್ನಾಟಕ



Vidyagiri DHARWAD-24.
08

# ಸ್ವಾಮಿ ವಿವೇಕಾನಂದರ ಉಪನ್ಯಾಸಗಳು ಹಾಗೂ ರಾಷ್ಟ್ರಧರ್ಮ

• ಡಾ. ಆರ್. ವಿ. ಪಾಟೀಲ

ಹೊಸ ಮನ್ವಂತರವನ್ನೆ ಹುಟ್ಟು ಹಾಕಿ ಭಾರತ ದೇಶಕ್ಕೆ ಹಾಗೂ ಹಿಂದೂ ಧರ್ಮ ಹಾಗೂ ರಾಷ್ಟ್ರಧರ್ಮಕ್ಕೆ ಜೀವಂತಿಕೆಯನ್ನು ನೀಡಿದ ಹಿಂದು ಯುವಕನೊಬ್ಬನನ್ನು ಇಂದು ತಿಳಿಯುವುದೆ ಒಂದು ಸಾಧನೆಯಾಗಿದೆ. ಪ್ರತಿಯೊಬ್ಬ ಹಿಂದು ತನ್ನ ನಂಬಿಕೆಗಳ ಸಮರ್ಥನೆಗಾಗಿ ಹಾಗೂ ತಾಯಿಯಾದವಳು ತನ್ನ ಮಕ್ಕಳಿಗೆ ರಾಷ್ಟ್ರಭಕ್ತಿ, ಧರ್ಮ, ಮೌಲ್ಯಗಳನ್ನು ಬೋಧಿಸುವ ಭಾವನೆಗಳ ಪ್ರಮಾಣಕ್ಕೆ ನಿಜ ವ್ಯಕ್ತಿತ್ವದ ವಿವೇಕಾನಂದರನ್ನೆ ಆಶ್ರಯಿಸಬೇಕಾಗುತ್ತದೆ. ಇವರಂತಹ ವ್ಯಕ್ತಿಯೊಬ್ಬರು ಹುಟ್ಟಿಬಂದು ಸಮಸ್ತ ಭಾರತ ಮತ್ತು ಹಿಂದೂ ಜನಾಂಗದ ಅಂತಃಪ್ರಜ್ಞೆಯನ್ನು ಜಾಗೃತಗೊಳಿಸಿದರು. ಜೊತೆಗೆ ಇಡೀ ವಿಶ್ವದಲ್ಲಿ ರಾಷ್ಟ್ರಪ್ರೇಮ ಮತ್ತು ನಿಜಧರ್ಮದ ಸತ್ವವನ್ನು ತಿಳಿಸಿದ ಮಹಾನ್ ಸನ್ಯಾಸಿ ಇವರು.

ದೇವರ ವರಪ್ರಸಾದದಿಂದ ವಿಶ್ವನಾಥದತ್ತ-ಭುವನೇಶ್ವರಿದೇವಿ ದಂಪತಿಗಳ ಪುಣ್ಯ ಉದರದಲ್ಲಿ ಕ್ರಿ.ಶ. ೧೮೬೩ ಜನವರಿ ೧೨ ರಂದು ಸೂರ್ಯೋದಯದ ೬ ಗಂಟೆ ೩೩ ನಿಮಿಷ ೩೩ ಸೆಕೆಂಡು, ಕೃಷ್ಣಪಕ್ಷದ ಸಪ್ತಮಿಯ ಪುಣ್ಯ ಮುಹೂರ್ತದೊಳಗೆ ಭವ್ಯ ತೇಜೋಮಯವಾದ ವಿವೇಕಾನಂದರು ಜನಿಸಿದರು. ಅಜ್ಜನ ನೆನಪಿಗೆ ಮಗುವಿಗೆ ದುರ್ಗಾದಾಸನೆಂದು ಕರೆದರು. ಆದರೆ ಕಾಶಿ ವೀರೇಶ್ವರನನ್ನು ಬೇಡಿ ಪಡೆದ ಮಗನಾಗಿರುವುದರಿಂದ ವೀರೇಶ್ವರ ಎಂದು ತಾಯಿ ಕರೆದಳು. ಮುಂದೆ ಅನ್ನಪ್ರಾಸನದ ವೇಳೆಗೆ ನರೇಂದ್ರನಾಥ ಎಂದು ಹೆಸರಿಟ್ಟರು. ಪಾರಮಾರ್ಥಿಕವಾಗಿ ಬೆಳೆದು ವಿಶ್ವವಿಖ್ಯಾತಿ ಪಡೆದದ್ದು ಸ್ವಾಮಿ ವಿವೇಕಾನಂದರೆಂದು. ಇವರು ಅಮೇರಿಕಾದ ಚಿಕ್ಯಾಗೊದಲ್ಲಿ ನಡೆದ ವಿಶ್ವ ಧರ್ಮ ಸಮ್ಮೇಳನದಲ್ಲಿ ಭವ್ಯ ಭಾರತದಿಂದ ಹಿಂದು ಧರ್ಮದ ಪ್ರತಿನಿಧಿಯಾಗಿ ಹಿಂದು ಧರ್ಮವನ್ನು ಕುರಿತು ಉಪನ್ಯಾಸಗಳನ್ನು ನೀಡಿ ವಿಶ್ವವಿಖ್ಯಾತಿ ಪಡೆದರು. ಭಾರತೀಯತೆ ಹಾಗೂ ಹಿಂದೂ ಧರ್ಮದ ಸತ್ವವನ್ನು ಪ್ರಪಂಚಕ್ಕೆ ತಿಳಿಸಿಕೊಟ್ಟರು. ಇವರು ನೀಡಿದ ಆರು ಉಪನ್ಯಾಸಗಳಲ್ಲಿ ಹೇಳಿದ ವಿಷಯಗಳ ಸಂಕ್ಷಿಪ್ತವಾದ

PRINCIPAL
J.S.S. Banashankari Arts Commerce &
Shantikumar Gubbi Science College.
DHARWAD 580 004.



11